**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಕ್ರಾಸ್, ಸಂಪಿಗೆ ರಸ್ತೆ ಮಲ್ಲೇಶ್ವರಂ, ಬೆಂಗಳೂರು-12**

ಸಂಖ್ಯೆ: ಪಪೂಶಿಇ/ಕ್ರೀಶಾ/ವಿ.ಕ್ರೀ.ನಿ.ಪಾ/2020-21/11 ದಿನಾಂಕ:20/01/2021

ಇವರಿಗೆ,
ರಾಜ್ಯದ ಎಲ್ಲಾ ಕಾಲೇಜಿನ ಪ್ರಾಂಶುಪಾಲರಿಗೆ,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಮಾನ್ಯರೇ,

**ಸುತ್ತೋಲೆ**

ವಿಷಯ: ವಿಶೇಷ ಕ್ರೀಡಾ ನಿಧಿಯನ್ನು ಪಾವತಿಸುವ ಖಾತೆಯ ಹೆಸರು ಮತ್ತು IFSC CODE ಬದಲಾಗಿರುವ ಬಗ್ಗೆ.

****

ಮೇಲಿನ ವಿಷಯದನ್ವಯ ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಕಾಲೇಜಿನ ಪ್ರಾಂಶುಪಾಲರಿಗೆ ಈ ಮೂಲಕ ತಿಳಿಸುವುದೇನೆಂದರೆ, 2018-19 ನೇ ಸಾಲಿನಿಂದ ವಿಶೇಷ ಕ್ರೀಡಾ ನಿಧಿ[SSF] ವಂತಿಗೆಯ ಮೊತ್ತವನ್ನು ಆನ್‌ಲೈನ್ (Online) [NEFT/RTGS] ಮುಖಾಂತರ ಮಾನ್ಯ ನಿರ್ದೇಶಕರ ಹೆಸರಿನಲ್ಲಿರುವ ಖಾತೆಗೆ ಜಮಾ ಮಾಡಲಾಗುತ್ತಿದೆ. ಪ್ರಸ್ತುತ ಬ್ಯಾಂಕಿನ ಹೆಸರು ಮತ್ತು IFSC CODE ಬದಲಾಗಿರುವ ಕಾರಣ, ಇನ್ನು ಮುಂದೆ ಈ ಕೆಳಗೆ ನಮೂದಿಸಿರುವ ಹೊಸ IFSC CODE ಹೊಂದಿರುವ ಖಾತೆ ಸಂಖ್ಯೆಗೆ ವಿಶೇಷ ಕ್ರೀಡಾ ನಿಧಿಯ ಮೊತ್ತವನ್ನು ಜಮಾ ಮಾಡುವುದು. ತಮ್ಮ ಕಾಲೇಜಿನ ವಿಶೇಷ ಕ್ರೀಡಾ ನಿಧಿಯ ಮೊತ್ತವನ್ನು ಪಾವತಿಸಿ, ಜಮಾವಣೆಯ ಬಗ್ಗೆ ಮಾಹಿತಿಯನ್ನು NEFT/RTGSನ ದಾಖಲೆಯೊಂದಿಗೆ ತಮ್ಮ ಜಿಲ್ಲೆಯ ಉಪನಿರ್ದೇಶಕರಿಗೆ ಹಾಗೂ ಸಹಾಯಕ ನಿರ್ದೇಶಕರು (ಕ್ರೀಡೆ), ಕೇಂದ್ರ ಕಛೇರಿ ಇವರಿಗೆ ಸಲ್ಲಿಸುವುದು.

**ಬ್ಯಾಂಕಿನ ವಿವರಗಳು**

- **ಬ್ಯಾಂಕಿನ ಹೆಸರು: ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ**
- **ಶಾಖೆ: ಮಲ್ಲೇಶ್ವರಂ, 18ನೇ ಕ್ರಾಸ್, ಬೆಂಗಳೂರು**
- **ಖಾತೆ ಸಂಖ್ಯೆ: 520101019704581**
- **IFSC CODE: UBIN0903299**

ಸಹಾಯಕ ನಿರ್ದೇಶಕರು (ಕ್ರೀಡೆ)
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಯನ್ನು:

1. ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ – ದಾಖಲಾತಿ ಪ್ರಕ್ರಿಯೆಯ ನಂತರ, ತಮ್ಮ ಜಿಲ್ಲೆಯ ಎಲ್ಲಾ ಕಾಲೇಜಿನ ಪ್ರಾಂಶುಪಾಲರಿಂದ ಜಮಾವಣೆಯ ಮಾಹಿತಿ ಪಡೆದು, ನಮೂನೆಯಲ್ಲಿ ಕ್ರೋಢೀಕರಿಸಿ ಕಳುಹಿಸಲು ಕೋರಿದೆ.
2. ನಿರ್ದೇಶಕರ ಆಪ್ತ ಶಾಖೆ.
3. ಕಛೇರಿ ಪ್ರತಿ.